ಹುಡ್ಕೋ ಯೋಜನೆಯಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯಿಂದ ನಿರ್ಮಿಸಲಾಗಿರುವ ಮನೆಗಳು.

೧೦೨೬. ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ನೇ ಇಸವಿಗಳಲ್ಲಿ ಹುಡ್ಕೋ ಯೋಜನೆಯಲ್ಲಿ ಗೃಹ ಮಂಡಳಿಯು ಮನೆಗಳ ವಿತರಣೆ ಮಾಡಲು ಅರ್ಜಿ ಕರೆಯುವಾಗ ನಿಗದಿಪಡಿಸಿದ ಅನೇಕ ವರ್ಗಗಳ ಮನೆಗಳ ಬೆಲೆಗಳು ?

ಆ) ಮಂಜೂರಾತಿದಾರರಿಗೆ ಮಂಜೂರಾತಿಯ ಸಮಯದಲ್ಲಿ ಗೊತ್ತುಪಡಿಸುವ ಬೆಲೆ ಹಾಗೂ ವ್ಯತ್ಯಾಸಕ್ಕೆ ಕಾರಣಗಳು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು).-

ಅ)

ವರ್ಷ	ಮನೆಯ ವರ್ಗ	ಪ್ರಕಟಿತ ಬೆಲೆ (ರೂಪಾಯಿಗಳು)
೧೯೮೩-೮೪	ಆರ್ಥಿಕ ದುರ್ಬಲ ವರ್ಗ	೧೪,೦೦೦ ರಿಂದ ೧೮,೪೫೦
	ಕಡಿಮೆ ಆದಾಯ ವರ್ಗ	೨೫,೦೦೦ ರಿಂದ ೩೬,೫೦೦
	ಮಧ್ಯಮ ಆದಾಯ ವರ್ಗ	೪೨,೦೦೦ ರಿಂದ ೬೯,೨೦೦
೧೯೮೪-೮೫	ಈ ವರ್ಷದಲ್ಲಿ ಹುಡ್ಕೋ ಯೋಜನೆ ಅಥವಾ ರಾಜ್ಯ ಯೋಜನೆಯಲ್ಲಿ ಮನೆಗಳ ಪ್ರಕಟಣೆಯಾಗಿಲ್ಲ.	
೧೯೮೫-೮೬	ಹುಡ್ಕೋ ಯೋಜನೆಯಲ್ಲಿ.—	
	ಆರ್ಥಿಕ ದುರ್ಬಲ ವರ್ಗ	೧೩,೭೦೦ ರಿಂದ ೧೭,೦೦೦
	ಕಡಿಮೆ ಆದಾಯ ವರ್ಗ	೩೨,೨೮೦ ರಿಂದ ೪೨,೦೦೦
	ರಾಜ್ಯ ಯೋಜನೆಯಲ್ಲಿ.—	
	ಕಡಿಮೆ ಆದಾಯ ವರ್ಗ	೩೦,೦೦೦ ರಿಂದ ೪೪,೦೦೦
	ಮಧ್ಯಮ ಆದಾಯ ವರ್ಗ	೩೨,೩೦೦ ರಿಂದ ೮೭,೫೦೦

ಆ)

ವರ್ಷ	ಮನೆಯ ವರ್ಗ	ನಿರ್ಮಾಣ ವೆಚ್ಚ (ರೂಪಾಯಿಗಳಲ್ಲಿ)
೧೯೮೩-೮೪	ಆರ್ಥಿಕ ದುರ್ಬಲ ವರ್ಗ	೨೨,೮೬೪ ರಿಂದ ೨೯,೦೦೦
	ಕಡಿಮೆ ಆದಾಯ ವರ್ಗ	೨೮,೮೧೩ ರಿಂದ ೫೪,೦೦೦
	ಮಧ್ಯಮ ಆದಾಯ ವರ್ಗ	೫೬,೦೦೦ ರಿಂದ ೮೪,೦೦೦

೧೯೮೪–೮೫ ಈ ವರ್ಷದಲ್ಲಿ ಹುಡ್ಕೋ ಅಥವಾ ರಾಜ್ಯ ಯೋಜನೆಯಲ್ಲಿ ಮಂಜೂರಾತಿಗಾಗಿ ಮನೆಗಳ ಪ್ರಕಟಣೆಯಾಗಲಿಲ್ಲ.

೧೯೮೫–೮೬ ಹುಡ್ಕೋ ಯೋಜನೆಯಲ್ಲಿ.—

ಆರ್ಥಿಕ ದುರ್ಬಲ ವರ್ಗ	೧೩,೭೦೦ ರಿಂದ ೧೯,೪೬೬
ಕಡಿಮೆ ಆದಾಯ ವರ್ಗ	೩೨,೨೦೦ ರಿಂದ ೩೫,೯೦೨

ರಾಜ್ಯ ಯೋಜನೆಯಲ್ಲಿ.—

ಕಡಿಮೆ ಆದಾಯ ವರ್ಗ	೩೦,೦೦೦ ರಿಂದ ೪೪,೦೦೦
ಮಧ್ಯಮ ಆದಾಯ ವರ್ಗ	೩೨,೨೭೪ ರಿಂದ ೮೭,೫೦೦

ಪ್ರಕಟಣೆಯ ಬೆಲೆಯು ಹುಡ್ಕೋ ನಿಗದಿಪಡಿಸಿದ ಬೆಲೆಯಾಗಿರುತ್ತದೆ. ಕಟ್ಟಡ ಪೂರ್ತಿಗೊಂಡ ನಂತರ ನಿರ್ವಾಣ ವೆಚ್ಚದ ವರದಿಯಂತೆ ಬೆಲೆಯನ್ನು ಪುನಃ ನಿಗದಿಗೊಳಿಸುವುದರಿಂದ ಬೆಲೆಯಲ್ಲಿ ವ್ಯತ್ಯಾಸವಾಗುತ್ತದೆ. ಯೋಜನೆಯ ಪ್ರಕಟನೆಯ ಕಾಲದಿಂದ ಕಟ್ಟಡ ಮುಕ್ತಾಯದವರೆಗಿನ ಕಾಲಾವಕಾಶದಲ್ಲಿ ಉಂಟಾದ ಪಸ್ತುಗಳ ಬೆಲೆಯ ಹೆಚ್ಚಳದಿಂದ ಈ ವ್ಯತ್ಯಾಸವಾಗುತ್ತದೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ಮನೆಗಳನ್ನು ಕಟ್ಟಲಿಕ್ಕೆ ಕಂಟ್ರಾಕ್ಟ್ ಕೊಡುತ್ತಾರೆ. ಮುಂಗಡ ಹಣ ಪಡೆಯುವಾಗ ಮನೆ ಬೇಕಾದವರಿಂದ ಒಂದು ದರವನ್ನು ಗೊತ್ತು ಮಾಡಿ ತಿಳಿಸುತ್ತಾರೆ. ನಂತರ ೩೦–೪೦ ಪರ್ಸೆಂಟ್ ಜಾಸ್ತಿಯಾಗುತ್ತಾ ಹೋಗುತ್ತದೆ. ಮನೆಗಳ ಬೆಲೆಯು ಜಾಸ್ತಿಯಾಗುತ್ತದೆಂದು ಮುಂಚಿತವಾಗಿಯೇ ತಿಳಿಸಿದರೆ ಮನೆ ಪಡೆಯುವವರಿಗೆ ಅನುಕೂಲವಾಗುತ್ತದೆ. ಇಂಜಿನಿಯರ್‌ಗಳು ಒಂದು ರೀತಿಯ ಶೋಷಣೆ ಮಾಡುತ್ತಾರೆ. ಅಲ್ಲದೆ, ೫ ವರ್ಷದಲ್ಲಿ ಬಿದ್ದು ಹೋಗುವಂಥ ಮನೆ ಕಟ್ಟಿಕೊಟ್ಟಿದ್ದಾರೆನ್ನುವ ಆರೋಪವು ಕೂಡ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ರಾಮಪ್ಪನವರು ಹೇಳಿದಹಾಗೆ ಗುಣಮಟ್ಟದ ಬಗ್ಗೆ ನನಗೆ ಸಮಾಧಾನ ಇಲ್ಲ, ಸರ್ಕಾರಕ್ಕೂ ಸಮಾಧಾನ ಇಲ್ಲ. ಅದನ್ನು ಸರಿಮಾಡಲಿಕ್ಕೆ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ಶೋಷಣೆಯಾಗುವುದು ನಷ್ಟಗಮನಕ್ಕೆ ಬಂದಿಲ್ಲ ನಮಗೆಲ್ಲಾ ಗೊತ್ತಿರುವಂತೆ ಹೌಸಿಂಗ್ ಬೋರ್ಡಿನವರು ಮನೆಗಳನ್ನು ಕೊಡುತ್ತೇನೆಂದು ತೀರ್ಮಾನ ಮಾಡಿದಮೇಲೆ ಅವುಗಳ ಕೆಲಸ ಮುಗಿಯಬೇಕಾದರೆ ಕನಿಷ್ಟ ೪–೫ ವರ್ಷಗಳಾಗುತ್ತವೆ. ಅಲ್ಲದೆ, ೨–೩ ವರ್ಷಕ್ಕೆ ಒಂದು ಸಾರಿ ದರಗಳನ್ನು ಕೂಡ ರಿವೈಸ್ ಮಾಡುತ್ತಾರೆ. ಇವೆಲ್ಲವೂ ಮನೆಗಳನ್ನು ತೆಗೆದು ಕೊಳ್ಳುವವರ ಮೇಲೆ ಹಾಕಬೇಕಾಗುತ್ತದೆ.

ಶ್ರೀ ಎಂ. ರಾಮಪ್ಪ.—ನನ್ನ ಸ್ನೇಹಿತರೊಬ್ಬರಿಗೆ ಮನೆ ಕೊಡುವಾಗ ೫೦,೦೦೦ ಆಗುತ್ತದೆಂದು ತಿಳಿಸಿದ್ದರು, ಈಗ ೭೦,೦೦೦ ಜಾಸ್ತಿ ಮಾಡಿದ್ದೇವೆಂದು ತಿಳಿಸಿದ್ದಾರೆ. ೮,೦೦೦ ರೂಪಾಯಿ ಖರ್ಚು ಮಾಡಿದ್ದಾರೆ, ಅಲ್ಲದೆ ಮನೆ ಕೂಡ ಬಿದ್ದು ಹೋಗುತ್ತದೆಂದು ತಿಳಿಸಿದ್ದಾರೆ. ಪರ್ಸೆಂಟೇಜ್ ವ್ಯವಹಾರ ನಡೆಯುತ್ತದೆ. ಇದನ್ನು ಯಾರ ಮೇಲೆ ಹಾಕುತ್ತೀರಿ ? ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ತಡವಾಗುವುದನ್ನು ತಪ್ಪಿಸಿ, ಮನೆಗಳ ಕೆಲಸ ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಡಿಲೇ ಕಡಿಮೆ ಮಾಡುವುದಕ್ಕೆ ಕ್ರಮತೆಗೆದುಕೊಳ್ಳುತ್ತೇನೆ. ಸ್ಟೀಲ್ ಮತ್ತು ಸಿಮೆಂಟ್ ಬೆಲೆ ನಿರ್ಧಾರ ಮಾಡತಕ್ಕಂಥವರು ಹೌಸಿಂಗ್ ಬೋರ್ಡಿನವರಲ್ಲ, ಪರ್ಸೆಂಟೇಜ್ ನನಗೆ ಅರ್ಥವಾಗಿಲ್ಲ, ನಿರ್ದಿಷ್ಟವಾದ ಕೇಸು ಹೇಳಿದರೆ ಕೂಡಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ.—ಕಂಟ್ರಾಕ್ಟರು ಹೇಳಿದಂತೆ ಇವರು ಮಾಡುತ್ತಾರೆ. ಯಾವುದೇ ರೀತಿಯಲ್ಲೂ ರೀ ಟೆಂಡರ್ ಕರೆಯುವುದಿಲ್ಲ. ಮನೆಗಳನ್ನು ಕಟ್ಟುವ ವಿಚಾರದಲ್ಲಿ ಬಳ್ಳಾರಿಯಲ್ಲಿ ಸಾಕಷ್ಟು ಅವ್ಯವಹಾರಗಳು ನಡೆಯುತ್ತಿವೆ. ಪರ್ಸೆಂಟೇಜ್‌ನಲ್ಲಿ ಹೊಂದಾಣಿಕೆ ಮಾಡಿಕೊಂಡು ಕೆಲಸ ಮಾಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ —ಹೊಂದಾಣಿಕೆ ಪರ್ಸೆಂಟೇಜ್ ಅಳವಡಿಕೊಳ್ಳುವುದಕ್ಕೆ ಮತ್ತು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ವ್ಯವಹಾರದಲ್ಲಿ ಪ್ರೀಮಾ ಪೇಪರ್ ಕಂಡು ಬಂದರೂ ಕ್ರಮ ತೆಗೆದುಕೊಳ್ಳುತ್ತೇನೆ. ಎಸ್.ಆರ್. ರೇಟು ಜಾಸ್ತಿ ಆದಂತೆ, ಮನೆಗಳ ಬೆಲೆ ಕೂಡ ಜಾಸ್ತಿಯಾಗುತ್ತದೆ.

ಮೈಸೂರು ನಗರದಲ್ಲಿ ೧೯೮೫–೮೫ ಕಾಲದಲ್ಲಿ ಕಟ್ಟಿಸಿದ ಹುಡ್ಕೋ ಮನೆಗಳು

೬೧೯. ಶ್ರೀಮತಿ ಮುಕ್ತಾರುನ್ನೀಸ (ನರಸಿಂಹರಾಜ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರದಲ್ಲಿ ೧೯೮೫ ರಿಂದ ೧೯೮೫ರ ವರೆಗೆ ಹುಡ್ಕೋ ಯೋಜನೆಯಲ್ಲಿ ಕಟ್ಟಿಸಿದ ಕಡಿಮೆ ಆದಾಯ ವರ್ಗ, ಮಧ್ಯಮ ಆದಾಯ ವರ್ಗ ಮತ್ತು ಆರ್ಥಿಕ ದುರ್ಬಲ ವರ್ಗದ ಮನೆಗಳೆಷ್ಟು ?

ಆ) ಮೈಸೂರು ನಗರದಲ್ಲಿ ೧೯೮೫ ರಿಂದ ೧೯೮೬ರವರೆಗೆ ಹಂಚಲಾದ ಕಡಿಮೆ ಆದಾಯ ಮಧ್ಯಮ ಆದಾಯ ಮತ್ತು ಆರ್ಥಿಕ ದುರ್ಬಲ ವರ್ಗದ ಮನೆಗಳೆಷ್ಟು,

ಇ) ಮುಂದಿನ ಹಂತದಲ್ಲಿ ಮೇಲಿನ ಯೋಜನೆಗಳಲ್ಲಿ ಯೋಜಿಸಿ ಕಟ್ಟಬೇಕಿರುವ ಹೊಸ ಹುಡ್ಕೋ ಮನೆಗಳೆಷ್ಟು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಮಾನ್ಯ ವಸತಿ ಹಾಗೂ ಸಾರಿಗೆ ರಾಜ್ಯ ಸಚಿವರು).—

(ಅ) ಆರ್ಥಿಕ ದುರ್ಬಲ ವರ್ಗದ ಮನೆಗಳು		೩೭೫
ಕಡಿಮೆ ಆದಾಯವರ್ಗದ ಮನೆಗಳು		೫೧೬
ಮಧ್ಯಮ ಆದಾಯ ವರ್ಗದ ಮನೆಗಳು		೧೦೦
	ಒಟ್ಟು	೯೦೧
(ಆ) ಆರ್ಥಿಕ ದುರ್ಬಲ ವರ್ಗದ ಮನೆಗಳು		೨೬೫
ಕಡಿಮೆ ಆದಾಯವರ್ಗದ ಮನೆಗಳು		೧೬೦
ಮಧ್ಯಮ ಆದಾಯ ವರ್ಗದ ಮನೆಗಳು		೭೬
	ಒಟ್ಟು	೫೦೧
(ಇ) ಆರ್ಥಿಕ ದುರ್ಬಲ ವರ್ಗದ ಮನೆಗಳು		—
ಕಡಿಮೆ ಆದಾಯವರ್ಗದ ಮನೆಗಳು		೪೩೩
ಮಧ್ಯಮ ಆದಾಯವರ್ಗದ ಮನೆಗಳು		೧೨೩
	ಒಟ್ಟು	೫೫೬

SMT MUKTHARUNNISA—I would like to know whether the Hon'ble Urban Development Minister Sri Lakshmisagar is incharge of these HUDCO Houses or the Hon'ble Minister for Transport and Housing Sri Sindhia. Last time our Hon'ble Minister Sri Lakshmisagar inaugurated this HUDCO Scheme and within one month, the houses were distributed when I was in the Assembly. The houses were